3. ಕರ್ನಾಟಕ ಕಳ್ಳಭಟ್ಟಿ ವ್ಯಾಪಾರಿಗಳ, ಮಾದಕ ವಸ್ತು ಅಪರಾಧಿಗಳ, ಜೂಜುಕೋರರ, ಗೂಂಡಾಗಳ, ಅನೈತಿಕ ವ್ಯವಹಾರ ಅಪರಾಧಿಗಳ ಮತ್ತು ಕೊಳಚೆ ಪ್ರದೇಶಗಳನ್ನು ಕಬಳಿಸುವವರ ಅಪಾಯಕಾರಿ ಚಟುವಟಿಕೆಗಳ ಪ್ರತಿಬಂಧಕ (ತಿದ್ದುಪಡಿ) ವಿಧೇಯಕ, 1999.

4. ಕರ್ನಾಟಕ ನಿರಸನಗೊಳಿಸುವ ಮತ್ತು ತಿದ್ದುಪಡಿ ಮಾಡುವ (ಸಂಖ್ಯೆ:2) ವಿಧೇಯಕ, 1999.

5. ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ವಿಧೇಯಕ, 1999.

6. ಕರ್ನಾಟಕ ಅರಣ್ಯ ಮತ್ತು ಕೆಲವು ಇತರ ಕಾನೂನುಗಳ (ತಿದ್ದುಪಡಿ) ವಿಧೇಯಕ, 1999.

ಅಧ್ಯಕ್ಷರು : ಮಂಡಿಸಲಾಯಿತು.

ವಿತ್ತೀಯ ಕಾರ್ಯಕಲಾಪಗಳು

1999-2000 ನೇ ಸಾಲಿನ ಅನುದಾನ ಬೇಡಿಕೆಗಳ ಚರ್ಚೆಗೆ ಸರ್ಕಾರದಿಂದ ಉತ್ತರ.

+ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿ) : ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಬೇಡಿಕೆಗಳ ಮೇಲೆ ಸಾಕಷ್ಟು ಚರ್ಚೆಯಾಗಿದೆ. ಸನ್ಮಾನ್ಯ ಸದಸ್ಯರುಗಳು ಎಲ್ಲಾ ಇಲಾಖೆಗಳ ಬೇಡಿಕೆಗಳ ಮೇಲೆ ಮಾತನಾಡುವಂತಹ ಸಂದರ್ಭದಲ್ಲಿ ಕೆಲವರು ಸೂಕ್ತವಾದಂತಹ ಸಲಹೆಗಳನ್ನು ಕೊಟ್ಟಿದ್ದಾರೆ ಮತ್ತು ಕೆಲವರು ವಿರೋಧಿಸಿದ್ದಾರೆ. ಆದರೆ ಈಗ ನಾನು ಯಾವುದೇ ನೀತಿ ಧೋರಣೆಗಳ ಬಗ್ಗೆ ಪ್ರಸ್ತಾಪ ಮಾಡುವ ಸ್ಥಿತಿಯಲ್ಲಿ ಇಲ್ಲದೇ ಇರುವುದರಿಂದ, ಈಗಾಗಲೇ ಚುನಾವಣೆಯ ದಿನಾಂಕಗಳನ್ನು ಘೋಷಣೆ ಮಾಡಿರುವುದರಿಂದ ನಾವು ಯಾವುದೇ ಹೊಸ ಪಾಲಿಸಿ ಬಗ್ಗೆ ಹೇಳುವ ಹಾಗೆ ಇಲ್ಲ ಹೇಳಲೂ ಬಾರದು. ಆ ಕಾರಣದಿಂದ ತಾವು ಮತ್ತು ಎಲ್ಲಾ ಸನ್ಮಾನ್ಯ ಸದಸ್ಯರು ಸರ್ಕಾರದ ಲೋಪದೋಷಗಳು ಇದ್ದಿರಬಹುದು, ಹೇಳಿಕೆಗಳು ಇದ್ದಿರಬಹುದು. ಅವೆಲ್ಲವನ್ನೂ ತಾವು ಬಹಳ ಸಹನೆಯಿಂದ ಸಹಕರಿಸಿ ನಡೆದುಕೊಂಡಿದ್ದೀರಿ. ನಮ್ಮ ಎಲ್ಲಾ ಬೇಡಿಕೆಗಳನ್ನು ತಮ್ಮ ಮುಂದಿಟ್ಟಿದ್ದೇವೆ. ಈಗ ಸದನದ ಬಗ್ಗೆ, ತಮ್ಮ ಬಗ್ಗೆ, ಮಾನ್ಯ ಸದಸ್ಯರುಗಳ ಬಗ್ಗೆ ಕೆಲವು ಮಾತುಗಳನ್ನು ಸಭೆಯ ಕೊನೆಯಲ್ಲಿ ಹೇಳುತ್ತೇನೆ. ಈಗಾಗಲೇ ಪಾಸ್ ಆಗಿರುವಂತಹ ಡಿಮಾಂಡ್ಸ್ ಮತ್ತೆ ಪಾಸ್ ಆಗಬೇಕಾಗಿರುವ ಫೈನಾನ್ಸ್ ಬಿಲ್‌ಗಳು, ಇವುಗಳ ಬಗ್ಗೆ ಮಾನ್ಯ ವಿರೋಧಪಕ್ಷದ ಎಲ್ಲಾ ನಾಯಕರುಗಳು ಸಹಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ನನ್ನದೊಂದು ಪ್ರಶ್ನೆ ಏನೆಂದರೆ ಈ ಸದನದ ಅವಧಿ ಯಾವಾಗ ಮುಗಿಯುತ್ತದೆ?

ಅಧ್ಯಕ್ಷರು : ಈ ಸದನದ ಅವಧಿ ಡಿಸೆಂಬರ್ ತಿಂಗಳವರೆಗೂ ಇದೆ.

ಶ್ರೀ ವಾಟಾಳ್ ನಾಗರಾಜ್ : ಈಗಲೂ ಡಿಸೆಂಬರ್ ತಿಂಗಳವರೆಗೂ ಇದೆಯೇ? ಏಕೆಂದರೆ ಈಗ ಚುನಾವಣೆ ಘೋಷಣೆಯಾಗಿರುವುದರಿಂದ ಸೆಪ್ಟೆಂಬರ್‌ನಲ್ಲಿ ಚುನಾವಣೆ ಎಂದು ಹೇಳಿದ್ದಾರೆ. ಈ ಸದನದ ಅವಧಿ ಡಿಸೆಂಬರ್ ತಿಂಗಳವರೆಗೆ ಇರುವುದರಿಂದ ಈ ಮಧ್ಯೆ ಈ ಚುನಾವಣೆ ಘೋಷಣೆ ಆದನಂತರ, ಚುನಾವಣೆ ಮುಗಿದ ನಂತರ ಈ ಸದನಕ್ಕೆ ಅದರ ಶಕ್ತಿ ಇರುತ್ತದೆಯೇ? ಎಂದು ನಾನು ತಮ್ಮನ್ನು ಕೇಳುತ್ತಿದ್ದೇನೆ.

ಅಧ್ಯಕ್ಷರು : ನನಗೆ ಅಷ್ಟು ಗೊತ್ತಿಲ್ಲ, ಅದರ ಬಗ್ಗೆ ಕಾನೂನು ಪಂಡಿತರನ್ನು ನಾವು ಕೇಳಬೇಕು. ಈ ಪ್ರಶ್ನೆಯನ್ನು ಯಾರಾದರೂ ಕೇಳುತ್ತಾರೆಂದು ಅಲೋಚನೆ ಮಾಡಲಿಲ್ಲ. ಇದನ್ನು ನಾವು ಹೊರಗಡೆ ಚರ್ಚೆ ಮಾಡಬೇಕಾಗುತ್ತದೆ. ನನಗೂ ಇದರ ಬಗ್ಗೆ ಸ್ಪಷ್ಟ ತಿಳುವಳಿಕೆ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಈಗ ನಾಲ್ಕು ತಿಂಗಳು ಮುಂಚಿತವಾಗಿ ಚುನಾವಣೆ ಘೋಷಣೆಯಾಗಿರುವುದರಿಂದ ಈ ಚುನಾವಣೆ ಅಧಿಕಾರದ ಅವಧಿಯನ್ನು ಮೊಟಕು ಮಾಡಿದ ಹಾಗೆ ಆಗುತ್ತದೆ. ಇದು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಒಳ್ಳೆಯದಲ್ಲ.

ಶ್ರೀ ಜೆ.ಹೆಚ್.ಪಟೇಲ್ : ಅಕ್ಟೋಬರ್ ತಿಂಗಳ 5 ಮತ್ತು 6 ರಂದು ಮತಗಳ ಎಣಿಕೆಯಾದ ಮೇಲೆ ಚುನಾವಣಾ ಫಲಿತಾಂಶ ಪ್ರಕಟಣೆಯಾದ ಮೇಲೆ ಈ ಸದನ ಇರುವುದಿಲ್ಲ. ಕರ್ನಾಟಕ ರಾಜ್ಯ ವಿಧಾನಸಭೆಯ ಚುನಾವಣೆ ನಡೆಯುವುದರಿಂದ ಅಕ್ಟೋಬರ್ 5-6ರಂದು ಮತಗಳ ಎಣಿಕೆ ಕಾರ್ಯ ಮುಗಿದು ಅನೌನ್ಸ್ ಮಾಡಿದ ಮೇಲೆ ಹೊಸ ವಿಧಾನಸಭೆಯ ರಚನೆಯಾಗುತ್ತದೆ, ಆಗ ಇದು ಇರುವುದಿಲ್ಲ. ಆಗ ಮಾನ್ಯ ಸದಸ್ಯರು ಹೇಳಿದ ಹಾಗೆ ಎರಡು ತಿಂಗಳುಗಳ ಅವಧಿಯನ್ನು ಮೊಟಕು ಮಾಡಿದ ಹಾಗೆ ಆಯಿತು. ಈ ರೀತಿ ಮೊಟಕು ಮಾಡುವಂತಹ ಅಧಿಕಾರ ಚೀಫ್ ಎಲೆಕ್ಷನ್ ಕಮೀಷನ್‌ಗೆ ಇದೆ ಎನ್ನುವಂತಹ ಕಾನೂನನ್ನು ತಿಳಿದ ಮೇಲೆ ನಾವು ಸುಮ್ಮನಾದೆವು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಗಮನಕ್ಕೆ ತರುವುದೇನೆಂದರೆ ಕೊನೆಯ ಎರಡು ತಿಂಗಳುಗಳ ಅಧಿಕಾರದ ಅವಧಿಯನ್ನು ಮೊಟಕು ಮಾಡುವಂತಹ ಅಧಿಕಾರ ಚುನಾವಣಾ ಆಯೋಗಕ್ಕೆ ಇದೆಯಾ? ಅದನ್ನು ಮಾನ್ಯ ಮುಖ್ಯಮಂತ್ರಿಯವರು ಇದೆ ಎಂದು ಸ್ಪಷ್ಟಪಡಿಸುತ್ತಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಮುಖ್ಯಮಂತ್ರಿಯವರು ಕ್ಲಾರಿಫೈ ಮಾಡಿದ ಮೇಲೆ ತಮಗೆ ಸಮಾಧಾನವಾಗಿರಬಹುದೆಂದು ನನ್ನ ಭಾವನೆ. ಇದರ ಬಗ್ಗೆ ಕಾನೂನು ಇದೆ ಎಂದು ಹೇಳಿದ ಮೇಲೆ ಪುನಃ ಇದರ ಮೇಲೆ ಕಾಮೆಂಟ್ಸ್ ಮಾಡುವುದು ಬೇಡ. It has got its own authority ಈ ವೇದಿಕೆಯ ಮೇಲೆ ಚರ್ಚೆ ಮಾಡುವಂತಹ ಅವಶ್ಯಕತೆ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಈ ವೇದಿಕೆಯ ಅಸ್ತಿತ್ವ ಏನೆಂದು ನಾನು ಕೇಳುತ್ತಿದ್ದೇನೆ. ಅದರ ಬಗ್ಗೆ ಚರ್ಚೆ ಮಾಡುತ್ತಿಲ್ಲ, ತಾವು ಅದನ್ನು ಹೇಳಬೇಕಾದವರು, ಈ ವೇದಿಕೆಯ ಅಸ್ತಿತ್ವ ಏನು ಎಂದು ತಿಳಿದುಕೊಳ್ಳುವಂಥಾದ್ದು ಎಂದರೆ ಚರ್ಚೆಗೆ ಅವಕಾಶವಿಲ್ಲವೆಂದರೆ ಏನರ್ಥ?

ಶ್ರೀ ಹೆಚ್.ಎನ್. ನಂಜೇಗೌಡ : ಈಗ ಹೊಸದಾಗಿ ಕಾನ್‌ಸ್ಟಿಟ್ಯೂಟ್ ಆಯಿತೆಂದು ನೋಟಿಫಿಕೇಶನ್ ಆಗುವ ದಿವಸದವರೆಗೆ ನಮ್ಮದು, ಆ ನೋಟಿಫಿಕೇಷನ್ ಆದತಕ್ಷಣ ನಾವು ಹೊರಟು ಹೋಗಬೇಕು.

1999-2000ನೇ ಸಾಲಿನ ಅನುದಾನ ಬೇಡಿಕೆಗಳನ್ನು ಮತಕ್ಕೆ ಹಾಕುವುದು.

ಅಧ್ಯಕ್ಷರು : ಈಗ ಬೇಡಿಕೆಗಳನ್ನು ಮತಕ್ಕೆ ಹಾಕುತ್ತಿದ್ದೇನೆ. 1990-2000ನೇ ಸಾಲಿನ ಅನುದಾನ ಬೇಡಿಕೆಗಳಿಗೆ ಸಂಬಂಧಿಸಿದ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ,

``31.3.2000ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಬೇಡಿಕೆಗಳ ಸಂಖ್ಯೆ 1 ರಿಂದ 67 ಇವುಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನು ಸೇರಿ (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗನ್ನು ಮಂಜೂರು ಮಾಡುವುದು''

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ)

ಅಭಯಾಚನೆ ಕ್ರಮಾಂಕ 28 - ವೈದ್ಯಕೀಯ ಶಿಕ್ಷಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ವೈದ್ಯಕೀಯ ಶಿಕ್ಷಣ'' ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 202,04,88,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಯಾಚನೆ ಕ್ರಮಾಂಕ 29 - ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆ'' ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 735,99,37,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 114,82,00,000ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಯಾಚನೆ ಕ್ರಮಾಂಕ 52 - ಸಹಕಾರ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2000 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ಸಹಕಾರ''ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ